**ದಿನಾಂಕಃ 24/10/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ** ಶ್ರೀ ಬಿ.ಜಿ.ಆರ್ **ವಕೀಲರಿಂದಃ**

1. ದಾವಾಸ್ವತ್ತಿನ ಸರ್ವೆ ನಂ.56/4. ಅದರ ವಿಸ್ತೀರ್ಣ 2 ಎಕರೆ 22 ವರೆ ಗುಂಟೆ. ಅದರ ಚಕ್ಕುಬಂದಿ ಪೂರ್ವಕ್ಕೆ ಗೀತಾ, ಜ್ಯೋತಿ, ಮೋಹನ್ ಕುಮಾರ್, ಸುಶೀಲಮ್ಮ ಮತ್ತು ದಿನೇಶ ರವರ ಜಾಗ. ಪಶ್ಚಿಮಕ್ಕೆ ತೊಳಸಮ್ಮ ಮತ್ತು ದಾಮೋದರ ರವರ ಜಮೀನು. ಉತ್ತರಕ್ಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆ ತಿಮ್ಮಮ್ಮ ಮತ್ತು ತಮ್ಮೇಗೌಡರ ಜಮೀನು. ಈ ದಾವೆಯನ್ನು ನಾನು ಶಿವಣ್ಣ ರವರ ವಿರುದ್ಧ ಹೂಡಿದ್ದೇನೆ. ದಾವಾಸ್ವತ್ತಿನ ಚಕ್ಕುಬಂದಿಯಲ್ಲಿ ಶಿವಣ್ಣ ರವರ ಜಮೀನು ಇಲ್ಲ. ದಾವಾಸ್ವತ್ತಿನ ಪೂರ್ವ ಭಾಗದಲ್ಲಿ ಶಿವಣ್ಣ ರವರ ಜಾಗ ಇದ್ದರೂ ಸಹ ಇಲ್ಲವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಮ್ಮ ಜಾಗಕ್ಕೆ ಅಕ್ರಮ ಪ್ರವೇಶ ಮಾಡಿದ್ದರಿಂದ ಈ ದಾವೆ ಹೂಡಿದ್ದೇನೆ. ಈ ದಾವೆಯನ್ನು ದೇವಕಿಯವರ ವಿರುದ್ಧ ಸಹ ಹೂಡಿದ್ದೇನೆ. ಬೇರೆಯವರ ವಿರುದ್ಧ ಹೂಡಿಲ್ಲ. ಸದರಿಯವರು ನನ್ನ ಸ್ವತ್ತಿನ ದಕ್ಷಿಣ ದಿಕ್ಕಿನಲ್ಲಿ ಅತಿಕ್ರಮ ಪ್ರವೇಶ ಮಾಡಿದ್ದಾರೆ. ನಾನೇ ಈ ದಾವೆಯ ಮಾಹಿತಿಯನ್ನು ನನ್ನ ವಕೀಲರಿಗೆ ನೀಡಿದ್ದೇನೆ. ವಾದಿ-1 ಮತ್ತು 3 ರವರು ನನ್ನ ತಾಯಿ ಮತ್ತು ತಮ್ಮ. ಅವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇಲ್ಲ. ಪ್ರತಿವಾದಿಗಳು ಪಾಯ ಹಾಕಲು ಬಂದಿದ್ದರು, ಆದರೆ ಎಷ್ಟು ವಿಸ್ತೀರ್ಣ ಎಂದು ಗೊತ್ತಿಲ್ಲ. ದಿಃ02/09/2017 ರಂದು ಆ ರೀತಿ ಪಾಯ ಹಾಕಲು ಬಂದಿದ್ದರು. ನಾವು ಪ್ರಶ್ನಿಸಿದಾಗ ಪ್ರತಿವಾದಿಗಳು ಇದು ನಮ್ಮ ಜಾಗ ಎಂದು ತಿಳಿಸಿದ್ದರು. ಆಗ ನಾವು ಪೊಲೀಸ್ ಠಾಣೆಗೆ ಹೋದಾಗ ಸಿವಿಲ್ ವ್ಯಾಜ್ಯ ಇದೆ ನ್ಯಾಯಾಲಯಕ್ಕೆ ಹೋಗಿ ಎಂದು ತಿಳಿಸಿದ್ದರು. ಠಾಣೆಗೆ ಹೋದ ಬಗ್ಗೆ ದಾಖಲೆ ಇಲ್ಲ. ಪ್ರತಿವಾದಿಗಳು ಸದರಿ ದಿನಾಂಕದಂದು ಯಾವುದೇ ತಂಟೆ ತಕರಾರು ಮಾಡಿಲ್ಲ, ಆದರೂ ಸಹ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾಸ್ವತ್ತು ನಮ್ಮ ಅಜ್ಜಿಯಿಂದ ನಮಗೆ ಬಂದಿದೆ. ಅಜ್ಜಿ ಈಗ ಮರಣಗೊಂಡಿದ್ದಾರೆ. ನನ್ನ ಅಜ್ಜಿ ಸತ್ತ ನಂತರ ನನ್ನ ತಾಯಿ 1 ನೇ ವಾದಿಯ ಹೆಸರಿಗೆ ಖಾತೆ ವರ್ಗಾವಣೆಯಾಯಿತು. ರಂಗಸ್ವಾಮಿ ನನ್ನ ತಂದೆ. ನನ್ನ ವಾದಪತ್ರದಲ್ಲಿ ದಾವಾಸ್ವತ್ತು ನನ್ನ ತಂದೆ ರಂಗಸ್ವಾಮಿಗೆ ಸೇರಿದ್ದು ಎಂದು ತಿಳಿಸಿಲ್ಲ. ನನ್ನ ಅಜ್ಜಿಯ ಮರಣ ಪ್ರಮಾಣಪತ್ರ ಹಾಜರುಪಡಿಸಿಲ್ಲ. ದಾವಾಸ್ವತ್ತಿನಲ್ಲಿ

ವ್ಯವಸಾಯ ಮಾಡುತ್ತಿದ್ದೇನೆ. ನಾನು ವ್ಯವಸಾಯ ಮಾಡುತ್ತಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ.

4. ದಾವಾಸ್ವತ್ತಿನಲ್ಲಿ ನಿವೇಶನಗಳಾಗಿ ವಿಂಗಡಿಸಿ ನನ್ನ ಅಜ್ಜಿಯ ಕಾಲದಲ್ಲೇ ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ 3 ಗುಂಟೆ ಜಮೀನನ್ನು ನನ್ನ ಅಜ್ಜಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಮಾರಾಟದ ಕಾಲಕ್ಕೆ ಯಾವುದೇ ಪೋಡಾಗದೇ ಇನ್ನೂ ಸರ್ವೆ ನಂ.56 ಎಂದು ಇತ್ತು ಎಂದರೆ ಸರಿಯಲ್ಲ. ಖರೀದಿ ಮಾಡಿದಂತಹ ಸ್ವತ್ತಿನಲ್ಲಿ ಪ್ರತಿವಾದಿಗಳು ಮನೆಯನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಸರಿಪಡಿಸಲು ಸರ್ಕಾರದಿಂದ ಪ್ರತಿವಾದಿಗಳಿಗೆ ಹಣ ಸಂದಾಯವಾಗಿದೆ ಎಂದರೆ ಸರಿಯಲ್ಲ. ಅದರಂತೆ ಅವರು ಹಣವನ್ನು ಪಡೆದು ಮನೆಯನ್ನು ಸರಿಪಡಿಸಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಮನೆ ಕಟ್ಟಿಕೊಂಡ ದಿನದಿಂದ ಅಂದರೆ 1994 ರಿಂದಲೂ ಪ್ರತಿವಾದಿಗಳ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿಯಲ್ಲ.

5. ಈ ದಾವೆಯಲ್ಲಿ ನಾನು ಮನೆ ಕಟ್ಟಬಾರದು ಎಂದು ತಾತ್ಕಾಲಿಕ ನಿರ್ಬಂಧಕಾಜ್ಞೆ ಕೋರಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಅದರ ಆದೇಶ ಏನಾಗಿದೆ ಎಂದು ಗೊತ್ತಿಲ್ಲ. ಸದರಿ ಅರ್ಜಿ ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಆಯುಕ್ತರನ್ನು ನೇಮಿಸಬೇಕೆಂದು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಅದರೆ ಆದೇಶ ಏನಾಗಿದೆ ಎಂದು ಗೊತ್ತಿಲ್ಲ. ಸದರಿ ಅರ್ಜಿ ಪುರಸ್ಕಾರವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶದ ವಿರುದ್ಧ ಪ್ರತಿವಾದಿಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP.47161/2017 ನ್ನು ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯನ್ನು ಪುರಸ್ಕರಿಸಿ ಈ ನ್ಯಾಯಾಲಯದ ಆದೇಶವನ್ನು ತಿರಸ್ಕರಿಸಿತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಅತಿಕ್ರಮ ಮಾಡಲು ಬಂದಿದ್ದರು ಆದರೆ ಅತಿಕ್ರಮ ಮಾಡಿಲ್ಲ.

(ಮುಂದುವರೆದ ಪಾಟೀಸವಾಲನ್ನು ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಚ್ಚುವರಿ ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ,**

**ಪಿರಿಯಾಪಟ್ಟಣ.**